International Journal of Kannada Research
www.kannadajournal.com

ISSN: 2454–5813
IJKR 2023; 9(4): 42-50
© 2023 IJKR
www.kannadajournal.com
Received: 16-07-2023
Accepted: 21-09-2023

**ಮಹೇಶ್ ಎ. ಎಸ್**
ಮುಖ್ಯಸ್ಥರು, ಕನ್ನಡ ವಿಭಾಗ, ಸಂತ ಜೋಸೆಫರ ಪ್ರಥಮ ದರ್ಜೆ ಕಾಲೇಜು, ಜಯಲಕ್ಷ್ಮೀ ಪುರಂ, ಮೈಸೂರು, ಕರ್ನಾಟಕ, ಭಾರತ

Corresponding Author:
**ಮಹೇಶ್ ಎ. ಎಸ್**
ಮುಖ್ಯಸ್ಥರು, ಕನ್ನಡ ವಿಭಾಗ, ಸಂತ ಜೋಸೆಫರ ಪ್ರಥಮ ದರ್ಜೆ ಕಾಲೇಜು, ಜಯಲಕ್ಷ್ಮೀ ಪುರಂ, ಮೈಸೂರು, ಕರ್ನಾಟಕ, ಭಾರತ

# ಸಂಪ್ರದಾಯ ಮತ್ತು ವಿಜ್ಞಾನ: ವಿಜ್ಞಾನದ ಸತ್ಯ ಮತ್ತು ಅದರೊಳಗಿನ ಬದುಕಿನ ಸತ್ವ

**ಮಹೇಶ್ ಎ. ಎಸ್**

**ಪೀಠಿಕೆ**

ಮನುಷ್ಯನು ತನ್ನಿಡೀ ಬದುಕನ್ನು ರೂಢಿ ಸಂಪ್ರದಾಯವೆನ್ನುವ ನಂಬಿಕೆಗಳ ತಳಹದಿಯ ಮೇಲೆಯೇ ರೂಪಿಸಿಕೊಂಡು, ರೂಢಿಸಿಕೊಂಡಿದ್ದಾನೆ. ಈ ಸಂಪ್ರದಾಯಾಚರಣೆಗಳು ಅವನಿಗೆ ಅವನ ಹಿರಿಯರಿಂದ ಬಳುವಳಿಯಾಗಿ ಬಂದವುಗಳಾಗಿವೆ. ಹೀಗೆ ತಲತಲಾಂತರಗಳಿಂದ ಬಂದ ಈ ಆಚಾರ ವಿಚಾರಗಳೆಂಬ ರೂಢಿ ಸಂಪ್ರದಾಯದ ನಂಬಿಕೆಗಳಿಗೆ ಕಿಂಚಿತ್ತೂ ಊನವಾಗದಂತೆ ಅವುಗಳನ್ನು ಪಾಲಿಸಿಕೊಂಡು ಬಂದಿರುವುದಷ್ಟೇ ಅಲ್ಲದೆ, ಅವುಗಳನ್ನ ಜತನ ಜೋಪಾನದಿಂದ ಕಾಯ್ದು, ಪೋಷಿಸಿ ಕಾಪಾಡಿಕೊಳ್ಳುತ್ತಲೂ ಬರುತ್ತಿದ್ದಾನೆ. ತಾನು ಕಾಲವಾಗುವ ಮೊದಲು ಆ ಎಲ್ಲ ಸಂಪ್ರದಾಯಾಚರಣೆಗಳನ್ನು ತನ್ನ ಮುಂದಿನ ತಲೆಮಾರಿಗೆ ದಾಟಿಸಿ, ಅದರ ಮಹತ್ವವನ್ನು ಅವರಲ್ಲಿ ಮೂಡಿಸಿ, ಕಲಿಸಿ, ಅವರ ಬದುಕಿಗೆ ಅವುಗಳನ್ನ ಒಗ್ಗಿಸಿ, ಬಗ್ಗಿಸಿ, ತಪ್ಪು ಒಪ್ಪುಗಳನ್ನ ತಿದ್ದಿತೀಡಿ, ಓರೆಕೋರೆಗಳನ್ನ ಸರಿಪಡಿಸಿ ಕಣ್ಮುಚ್ಚಿದಾಗಲೇ ಅವನ ಬದುಕಿಗೆ ನೆಮ್ಮದಿ ಸಿಗುವುದು. ಇಂತಹ ನಂಬಿಕೆ, ಆಚಾರಗಳನ್ನು ಸತತವಾಗಿ ತನ್ನ ಜೀವನದುದ್ದಕ್ಕೂ ಪಾಲಿಸಿಕೊಂಡು ಬರುತ್ತಿರುವವನಿಗೆ ಅದರಲ್ಲಿರುವ ಸತ್ಯ ಮತ್ತು ಸತ್ವ ಎಷ್ಟೋ ಸಾರಿ ಅರಿವಿಗೆ ಬಂದಿರುವುದಿಲ್ಲ, ಇನ್ನೆಷ್ಟೋ ಬಾರಿ ಅದನ್ನು ಅರಿಯಲು ತಾನೇ ಪ್ರಯತ್ನವನ್ನು ಪಟ್ಟಿರುವುದಿಲ್ಲ. ಹೀಗಿದ್ದೂ ನಾವು ಆಚರಿಸಿಕೊಂಡು ಬರುತ್ತಿರುವ ಸಂಪ್ರದಾಯಗಳಲ್ಲಿ ವಿಜ್ಞಾನವಿದೆಯೇ, ಹಾಗೊಂದು ವೇಳೆ ಇರುವುದೇ ಆದರೆ ಅದನ್ನೇಕೆ ನಾವು ತಿಳಿದು ಪಾಲಿಸುತ್ತಿಲ್ಲವೆಂಬ ಪ್ರಶ್ನೆ ನಮ್ಮನ್ನು ಕಾಡದಿರದು. ನಮ್ಮ ಪ್ರತಿಯೊಂದು ಆಚಾರಗಳನ್ನು ವಿಚಾರ ಮಾಡಿ ನೋಡಿದರೆ ಅವುಗಳೊಳಗೆ ಒಂದಲ್ಲ ಒಂದು ವೈಜ್ಞಾನಿಕ ಹಿನ್ನಲೆ ಇದ್ದೇ ಇರುತ್ತದೆ. ಭಾರತದಂತಹ ಸಂಪ್ರದಾಯಬದ್ಧ ದೇಶದಲ್ಲಿ ನೂರಕ್ಕೆ ತೊಂಬತ್ತರಷ್ಟು ಮಂದಿ ತಮ್ಮ ಆಚಾರ, ರೂಢಿ, ಸಂಪ್ರದಾಯಗಳ ಅನುಸರಣೆಯಲ್ಲಿ ಮತ್ತೊಬ್ಬರನ್ನ ಅನುಕರಿಸುತ್ತಿದ್ದಾರೆಯೇ ವಿನಃ, ಅದರೊಳಗಿನ ಮೌಲ್ಯಗಳನ್ನ ಅರಿತು, ತಿಳಿದು, ವಿಚಾರ ಮಾಡಿ ಆಚರಿಸುತ್ತಿಲ್ಲ.ನಮ್ಮೆಲ್ಲ ಸಂಪ್ರದಾಯದದೊಳಗೆ

ಶುದ್ಧ ವಿಜ್ಞಾನವಿದೆ, ಎಲ್ಲದಕ್ಕೂ ಒಂದು ವೈಜ್ಞಾನಿಕ ತಳಹದಿಯ ಕಾರಣವಿದೆ, ಇದರ ಸರಿಯಾದ ಅರಿವಿರದ ನಾವು ಸಂಪ್ರದಾಯಗಳನ್ನ ಮೂಢನಂಬಿಕೆಗಳ ರೂಪದಲ್ಲಿ ಅನುಕರಿಸುತ್ತಿದ್ದೇವೆ.ಇಂದು ನಾವೆಲ್ಲರೂ ಓದು, ಬರಹ ಕಲಿತವರು, ಆಧುನಿಕತೆಯ ಬದುಕಿಗೆ ತಾಂತ್ರಿಕತೆಯನ್ನು ಒಗ್ಗಿಸಿಕೊಂಡು ಜಗತ್ತನ್ನೇ ಒಂದು ಜಾಗತಿಕ ಹಳ್ಳಿಯನ್ನಾಗಿ ಮಾಡಿಕೊಂಡವರು, ನಾಗರೀಕತೆಯ ಹೆಸರಿನಲ್ಲಿ ಹೊರಗಿನವರ ಸಂಸ್ಕೃತಿಗೆ ಮಾರು ಹೋದವರು. ಎಲ್ಲವೂ ಗೊತ್ತಿದೆ ಎನ್ನುವ ಹಮ್ಮು ಬಿಮ್ಮಿನ ಜಿದ್ದಿಗೆ ಬಿದ್ದವರು, ಇಷ್ಟೆಲ್ಲ ಇರುವ ನಾವು ನಮ್ಮ ವಿಜ್ಞಾನದ ಹೂರಣ ತುಂಬಿದ ಆಚರಣೆಗಳನ್ನು ಹೊರಗಿನವರಿಗೆ ತಲುಪಿಸುವಲ್ಲಿ ಸೋತು ಸೊರಗಿದ್ದೇವೆ. ಹಾಗೇ ತಲುಪಿಸುವ ಜವಾಬ್ದಾರಿ ನಮ್ಮದಲ್ಲ, ನಮ್ಮದೇನಿದ್ದರೂ ಹೊರಗಿನವರ ಸಂಸ್ಕೃತಿ, ಆಚರಣೆಗಳನ್ನು ಅಮಲೇರಿಸಿಕೊಂಡು ಮೈಮರೆತು ಕುಣಿದು ಕುಪ್ಪಳಿಸುವುದಷ್ಟೇ ಎಂದು ಕೊಂಡಿದ್ದೇವೆ. ಇದೇ ಬೇಜವಾಬ್ದಾರಿತನ ನಮ್ಮಲ್ಲಿ ಮುಂದುವರೆದದ್ದೇ ಆದರೆ ಮುಂದೊಂದು ದಿನ ನಮ್ಮ ಸಂಸ್ಕೃತಿ ಸೋತು ಸೊರಗುತ್ತದೆ, ಕೊರಗಿ ಕೊನೆಯುಸಿರನ್ನೆಳೆಯುತ್ತದೆ, ಆಗ ನಾವು ನಮ್ಮನ್ನು ಗುರುತಿಸಿಕೊಳ್ಳಲು, ನಮ್ಮ ತನವನ್ನು ಕಂಡುಕೊಳ್ಳಲು ಹೆಣಗಾಡಬೇಕಾಗುತ್ತದೆ, ಸ್ವಂತಿಕೆಯೇ ಇಲ್ಲದ ಬದುಕೊಂದನ್ನು ಬಾಳುತ್ತ ಸಾಗಬೇಕಾಗುತ್ತದೆ ಎನ್ನುವ ಎಚ್ಚರಿಕೆಯ ಗಂಟೆ ನಮ್ಮೊಳಗೆ ಸದಾ ಜಾಗೃತವಾಗಿದ್ದರಷ್ಟೇ ಒಳಿತು.

ನಮ್ಮ ಮನೆಗಳಲ್ಲಿ ದಿನನಿತ್ಯದ ಬದುಕಿನಲ್ಲಿ, ಹಬ್ಬ ಹರಿದಿನಗಳಲ್ಲಿ, ಸಂಭ್ರಮ, ಸೂತಕಗಳಲ್ಲಿ ಸಂಪ್ರದಾಯದ ಹೆಸರಿನಲ್ಲಿ ಆಚರಣೆ, ಅನುಸರಣೆಗೊಳ್ಳುತ್ತಿರುವ ವಿಜ್ಞಾನದ ವಿಚಾರಗಳತ್ತ ನಾವೀಗ ಗಮನ ಹರಿಸೋಣ.

ಹಣೆಗೆ ಕುಂಕುಮ ಧರಿಸುವ ಪದ್ಧತಿ : ಹಿಂದಿನ ಕಾಲದಿಂದಲೂ ಗಂಡು ಹೆಣ್ಣೆಂಬ ಭೇದಭಾವವಿಲ್ಲದೆ ಹಣೆಗೆ ಕುಂಕುಮವನ್ನು ಧರಿಸುವ ಪದ್ಧತಿ ನಮ್ಮ ಭಾರತೀಯ ಸಂಪ್ರದಾಯದಲ್ಲಿ ರೂಢಿಯಲ್ಲಿದೆ. ಮಜ್ಜನ, ಮುಖ ಮಜ್ಜನ ಪೂರೈಸಿದಾಗ, ದೇವಸ್ಥಾನಗಳಿಗೆ ಭೇಟಿ ಕೊಟ್ಟಾಗ, ಶುಭಸಮಾರಂಭಗಳಂತವುಗಳಲ್ಲಿ ಹೆಣ್ಣು ಮಕ್ಕಳು, ಮುತ್ತೈದೆಯರು ಕುಂಕುಮವನ್ನು ಎರಡು ಹುಬ್ಬುಗಳ ಮಧ್ಯಭಾಗಕ್ಕೆ ಧರಿಸುವುದು ರೂಢಿ. ಹೀಗೆ ಧರಿಸುವುದರಿಂದ ಮೊಗಕ್ಕೆ ವಿಶೇಷವಾದ ಕಳೆಬಂದು ಎದುರಿನವರಿಗೆ ಲಕ್ಷಣವಾಗಿ ಕಾಣುವುದರೊಟ್ಟಿಗೆ, ಮನೆಗೆ ಶೋಭೆ, ಮೊಗಕ್ಕೆ ಲಕ್ಷಣವೆಂದು ಹೇಳುವುದರ ಮೂಲಕ ನಮ್ಮ ನಂಬಿಕೆಯನ್ನು ಉಳಿಸಿಕೊಂಡು ಬರುತ್ತಿದ್ದಾರೆ.ಆದರೆ ಇಲ್ಲಿ ಅಸಲಿಗಿರುವ ಕಾರಣವೇ ಬೇರೆ, ಮೆದುಳಿನಿಂದ ಹೊರಟ ಸೂಕ್ಷ್ಮಾತಿಸೂಕ್ಷ್ಮ ನರಗಳು ನಮ್ಮ ಹಣೆಯಲ್ಲಿನ ಎರಡು ಹುಬ್ಬುಗಳ ಮಧ್ಯಸ್ಥಳದಿಂದ ಹಾದು ನಮ್ಮ ಇಡೀ ದೇಹಕ್ಕೆ ಹರಡಿಕೊಂಡಿರುವುದರಿಂದ ನೇಸರನ ನೇರಳಾತೀತ ಕಿರಣಗಳು ಸೂಕ್ಷ್ಮಾತಿಸೂಕ್ಷ್ಮ ನರಗಳ ಮೇಲೆ ಬಿದ್ದು ಅವುಗಳಿಗೆ ತೊಂದರೆಯುಂಟಾಗುವುದಲ್ಲದೆ, ದೇಹದಲ್ಲಿನ ಚಟುವಟಿಕೆಗಳ ಮೇಲೂ ತೊಂದರೆಯಾಗಬಹುದು. ಆ ಕಾರಣಕ್ಕೆ ನಾವು ಕೆಂಪು ಬಣ್ಣದ ಕುಂಕುಮವನ್ನು ಹಣೆಯ ಮಧ್ಯಭಾಗಕ್ಕೆ ಧರಿಸುವುದರಿಂದ ಅದು ನೇಸರನ ನೆರಳಾತೀತ ಕಿರಣಗಳಿಗೆ ಪ್ರತಿಫಲನವನ್ನುಂಟು ಮಾಡಿ, ಆ ಕಿರಣಗಳಿಂದಾಗುವ ನಷ್ಟವನ್ನು ತಪ್ಪಿಸುತ್ತದೆ. ಜೊತೆಗೆ ಹಣೆಯ ಮಧ್ಯದಲ್ಲಿ ಕುಂಕುಮ ಧರಿಸುವುದರಿಂದ ನಮ್ಮ ಅಂದವನ್ನು ಹೆಚ್ಚಿಸುತ್ತದೆ. ಹಿಂದುಗಳು ಇದನ್ನು ಶುಭಸೂಚಕವೆಂದು ಕರೆದು, ಇದಕ್ಕೆ ಇನ್ನಷ್ಟು ಘನತೆ ಗೌರವವು ಹೆಚ್ಚುವಂತೆ ನೋಡಿಕೊಂಡಿದ್ದಾರೆ.

ಎಡಮಗ್ಗುಲಲ್ಲಿ ಏಳಬಾರದೇಕೆ ? : ನಾವು ಚಿಕ್ಕವರಿದ್ದಾಗ ಏನಾದರೊಂದು ಚೇಷ್ಟೆ ಮಾಡಿದರೆ ಇವತ್ತು ಎಡಮಗ್ಗುಲಲ್ಲಿ ಎದ್ದಿದ್ದೀಯ ಅನ್ನುತ್ತೆ, ಚನ್ನಾಗಿ ಲಾತ ಬೀಳುತ್ತವೆಂಬ ಎಚ್ಚರಿಕೆಯ ಮಾತುಗಳು ಮನೆಯೊಳಗೆ ಆಗಾಗ ಕೇಳಿ ಬರುತ್ತಿದ್ದವು. ಆಗೆಲ್ಲ ನಮಗೆ ಅನಿಸುತ್ತಿದದ್ದು ಇಷ್ಟೇ, ನಮ್ಮ ದೇಹದ ಎಡಭಾಗ ಕೆಟ್ಟದ್ದು, ಆ ಭಾಗದಲ್ಲಿ ಏಳಬಾರದು, ಒಂದು ವೇಳೆ ಮರೆತು ಎದ್ದರು, ಮತ್ತೆ ನೆನಪು ಮಾಡಿಕೊಂಡು ಹೋಗಿ ಒಂದೆರಡು ನಿಮಿಷ ಮಲಗಿ ಬಲಭಾಗದಲ್ಲಿ ಎದ್ದು ಸಮಾಧಾನ ಪಟ್ಟ ಎಷ್ಟೋ ಉದಾಹರಣೆಗಳಿವೆ. ಆದರೆ ಇಲ್ಲಿ ಹಾಗೆ ಹೇಳುತ್ತಿದದ್ದು ಯಾವ ಕಾರಣಕ್ಕೆಂದು ನೋಡುವ, ನಮ್ಮ ಎದೆಯ ಎಡಭಾಗದಲ್ಲಿ ಹೃದಯವಿದೆ, ನಾವು ಏಳುವಾಗ ಎಡಭಾಗದಲ್ಲಿ ಎದ್ದರೆ, ಅದರ ಮೇಲೆ ಒತ್ತಡ ಬಿದ್ದು, ಅದರ ಚಟುವಟಿಕೆಗಳಿಗೆ ತೊಂದರೆಯಾಗಬಹುದು ಎನ್ನುವ ವಿಚಾರವೇ

ಇಲ್ಲಿ ಮುಖ್ಯ. ಆದರೆ ಬಹುತೇಕ ಜನರಿಗೆ ವಿಜ್ಞಾನದ ಅರಿವು ಇಲ್ಲದಿದ್ದರಿಂದ ಅವರು ಎಡಭಾಗ ಕೆಟ್ಟದೆಂದು ಹೇಳಿ ನಮಗೆಲ್ಲ ಬಲಭಾಗದಲ್ಲಿ ಏಳುವ ಅಭ್ಯಾಸ ಮಾಡಿಸಿರುವುದು.ಹೃದಯವಿರುವ ಭಾಗದ ಅಂಗಾಂಗಗಳನ್ನು ಆದಷ್ಟು ಕಡಿಮೆ ಬಳಸಬೇಕು ಮತ್ತು ಎಡಭಾಗದಲ್ಲಿ ಹೆಚ್ಚು ಹೊತ್ತು ಮಲಗಿ ನಿದ್ರಿಸಬಾರದು, ಹಾಗೇ ಕೈಗಳನ್ನ ಎದೆಯ ಮೇಲಿಟ್ಟುಕೊಂಡು ನಿದ್ರೆ ಮಾಡುವುದರಿಂದ ನಮ್ಮ ಸರಾಗ ಉಸಿರಾಟಕ್ಕೆ ಮತ್ತು ಹೃದಯ ಬಡಿತಕ್ಕೆ ತೊಂದರೆಯಾಗುವುದೆಂಬುದೇ ಇದರ ಹಿಂದಿರುವ ಮುಖ್ಯ ಉದ್ದೇಶವಾಗಿದೆ.

ನಾವೆಲ್ಲರು ಬೆಳಿಗ್ಗೆ ಹಾಸಿಗೆಯಿಂದ ಎದ್ದ ಕೂಡಲೇ ಎರಡು ಅಂಗೈಗಳನ್ನು ಒಂದನ್ನು ಮತ್ತೊಂದಕ್ಕೆ ಉಜ್ಜಿ, ಕಣ್ಣು, ಕೆನ್ನೆಗಳಿಗೆ ಒತ್ತಿಕೊಳ್ಳುತ್ತೇವೆ. ಹಾಗೆ ಮಾಡಲು ಕಾರಣವೇನು ಎಂದೂ ಮನೆಯಲ್ಲಿನ ಹಿರಿಯರನ್ನ ಕೇಳಿದರೆ ಅವರಿಂದ ಬರುವ ಉತ್ತರ ಹೀಗಿರುತ್ತದೆ. "ಕರಾಗ್ರೆ ವಸತೇ ಲಕ್ಷ್ಮೀ, ಕರಮಧ್ಯೇ ಸರಸ್ವತೀ, ಕರಮೂಲೇ ಸ್ಥಿತಾ ಗೌರೀ ಪ್ರಭಾತೇ" ಎನ್ನುವ ಶ್ಲೋಕ ಹೇಳಿ, ಹಸ್ತದ ಮೂಲದಲ್ಲಿ ಗೌರಿ, ಮಧ್ಯದಲ್ಲಿ ಸರಸ್ವತಿ, ತುದಿಯಲ್ಲಿ ಲಕ್ಷ್ಮಿ ಇರುತ್ತಾರೆ, ಇಂತಹ ಕೈಯನ್ನು ಕಣ್ಣಿಗೆ ಒತ್ತಿಕೊಂಡು ದರುಶನ ಮಾಡುವುದರಿಂದ ಇಡೀ ದಿನ ನಮಗೆ ಒಳ್ಳೆಯದಾಗುತ್ತದೆ ಎನ್ನುವ ಮಾತುಗಳನ್ನು ನಾವು ನೀವೆಲ್ಲ ಕೇಳಿಯೇ ಇರುತ್ತೇವೆ. ಆದರೆ ಇಲ್ಲಿರುವ ಕಾರಣವೇ ಬೇರೆಯಿದೆ, ಎದ್ದ ಕೂಡಲೇ ನಮ್ಮ ಕರಗಳನ್ನ ಉಜ್ಜಿ ಶಾಖವನ್ನ ಉತ್ಪತ್ತಿ ಮಾಡಿ, ಅದನ್ನು ಕೆನ್ನೆ, ಕಣ್ಣಿಗಳಿಗೆ ಒತ್ತಿಕೊಂಡು ತಣ್ಣಗಿರುವ ಆ ಭಾಗಗಳನ್ನು ಬಿಸಿಯಾಗಿಸುವ ಪ್ರಯತ್ನ ಮಾಡುತ್ತೇವೆ. ಹೀಗೆ ಇಡೀ ರಾತ್ರಿ ಹೊದಿಕೆಯಿಂದ ಹೊರಗಿರುವ ಈ ಭಾಗಗಳಿಗೆ ಬೆಳಿಗ್ಗೆ ಎದ್ದ ಕೂಡಲೇ ಎರಡು ಕೈಗಳನ್ನು ಉಜ್ಜಿ ಶಾಖವನ್ನು ಉತ್ಪತ್ತಿ ಮಾಡುವುದರಿಂದ ನಮ್ಮ ನರಗಳು ಚುರಕಾಗಿ ದೇಹದ ಚಟುವಟಿಕೆಗಳಿಗೆ ಇಲ್ಲಿಂದ ಮರುಚಾಲನೆ ಕೊಡುವುದಾಗಿದೆ.

ರಾತ್ರಿಯ ವೇಳೆಯಲ್ಲಿ ಮರದ ಕೆಳಗೇಕೆ ಮಲಗಬಾರದು: ರಾತ್ರಿಯ ವೇಳೆಯಲ್ಲಿ ಎಲ್ಲಾ ಜಾತಿಯ ಮರಗಿಡಗಳು ಅತಿ ಹೆಚ್ಚು ಇಂಗಾಲದ ಡೈಆಕ್ಸೈಡನ್ನು ಹೊರಸೂಸುತ್ತವೆ. ಇದರಿಂದ ರಾತ್ರಿ ವೇಳೆ ಮರದ ಕೆಳಗೆ ಮಲಗಿದ ವ್ಯಕ್ತಿಗೆ ಸರಿಯಾದ ಪ್ರಮಾಣದಲ್ಲಿ ಆಮ್ಲಜನಕ ಸಿಗದೆ ಉಸಿರಾಟದ ಸಮಸ್ಯೆಯನ್ನು ಎದುರಿಸಬೇಕಾಗುತ್ತದೆ. ಅದರಲ್ಲಿಯೂ ಹುಣಸೆಮರಗಳು ಹೆಚ್ಚು ಇಂಗಾಲದ ಡೈ ಆಕ್ಸೈಡನ್ನು ಹೊರ ಸೂಸುತ್ತದೆ. ನಮ್ಮ ಜನರಲ್ಲಿ ಹಿಂದಿನಿಂದಲೂ ಇನ್ನೊಂದು ಮೂಢನಂಬಿಕೆ ಬಲವಾಗಿಯೇ ಬೇರೂರಿದೆ. ಅದೆಂದರೆ ಹುಣಸೆಮರದಲ್ಲಿ ದೆವ್ವಗಳಿರುತ್ತವೆ, ರಾತ್ರಿ ವೇಳೆ ಅದರ ಸುತ್ತಮುತ್ತ ಓಡಾಟ ಮಾಡುವುದಾಗಲಿ, ಕೆಳಗೆ ಮಲಗುವುದಾಗಲಿ ಮಾಡಿದರೆ ಅವು ನಮಗೆ ತೊಂದರೆ ಕೊಡುತ್ತವೆಂದು, ಅದಕ್ಕೆ ರಾತ್ರಿ ವೇಳೆಯಲ್ಲಿ ಹುಣಸೆಮರದ ಕೆಳಗೆ ಮಲಗುವುದಿರಲಿ, ಹತ್ತಿರಕ್ಕೂ ಸುಳಿಯಕೂಡದೆಂದು ಹಿರಿಯರು ಹೆದರಿಸಿದ್ದಾರೆ. ಹಾಗಿದ್ದರೆ ಅದೇ ಮರದ ಹುಣಸೆಹಣ್ಣನ್ನೇ ಅಡುಗೆಗೆ ಬಳಸುತ್ತೇವೆ,ಅದರಿಂದ ತಯಾರಾದ ಅಡುಗೆಯನ್ನು ಸೇವಿಸುತ್ತೇವೆ, ಮತ್ತೇಕೆ ಆ ದೆವ್ವಗಳು ನಮ್ಮ ಹೊಟ್ಟೆಯೊಳಗೆ ನೃತ್ಯ ಮಾಡುವುದಿಲ್ಲ.

ಇನ್ನೂ ಅರಳಿಮರದ ವಿಚಾರಕ್ಕೆ ಬರೋಣ. ಇದನ್ನು ಅಶ್ವತವೃಕ್ಷವೆಂದು, ಭೋದಿವೃಕ್ಷವೆಂದು ಕರೆದ ನಮ್ಮ ಹಿರಿಯರು ಇದರಲ್ಲಿ ದೇವಾನುದೇವತೆಗಳು ನೆಲೆಸಿರುತ್ತವೆಂದೇಳಿ ನಿರಂತರವಾಗಿ ಪೂಜೆ ಸಲ್ಲಿಸಿಕೊಂಡೇ ಬರುತ್ತಿದ್ದಾರೆ.ಇದು ನಿಜವೇ, ದೇವತೆಗಳು ಇಲ್ಲಿ ಇರುತ್ತವೆಯೇ ಎನ್ನುವ ಈ ಪ್ರಶ್ನೆಗೆ ವಿಜ್ಞಾನಲೋಕವು ಇಲ್ಲವೆನ್ನುತ್ತದೆ. ಹಾಗಾದರೆ ಈ ಮರವನ್ನು ಪೂಜಿಸುವುದೇಕೆ ಎನ್ನುವ ಪ್ರಶ್ನೆ ನಮ್ಮ ಮುಂದೆ ಎದ್ದು ನಿಲ್ಲುತ್ತದೆ. ಅರಳಿಮರವು ಬೇರೆಲ್ಲ ಮರಗಳಿಗಿಂತ ಹೆಚ್ಚು ಶುದ್ಧವಾದ ಮತ್ತು ಹೆಚ್ಚಿನ ಪ್ರಮಾಣದ ಆಮ್ಲಜನಕವನ್ನು ಉತ್ಪತ್ತಿ ಮಾಡುತ್ತದೆ. ಈ ಕಾರಣಕ್ಕಾಗಿಯೇ ಪ್ರತಿ ಊರುಗಳಲ್ಲಿ ಒಂದೆರಡು ಅರಳಿಗಿಡಗಳನ್ನ ದೇವಾಲಯದ ಬಳಿಯಲ್ಲಿಯೇ ನೆಟ್ಟು ಬೆಳಸುತ್ತಾರೆ. ಉತ್ಸವ, ಪೂಜೆ ಇತ್ಯಾದಿಗಳ ನೆಪ ಮಾಡಿಕೊಂಡು ದೇವಾಲಯದ ಬಳಿ ಆಗಾಗ ಹೆಚ್ಚು ಜನರು ಸೇರಿಯೇ ಸೇರುತ್ತಾರೆ. ಅವರಿಗೆ ಸ್ವಚ್ಛ, ಶುದ್ದ ಆಮ್ಲಜನಕ ಸಿಗುವಂತಾಗಲಿ ಎನ್ನುವುದೇ ಇದರ ಹಿಂದಿರುವ ಉದ್ದೇಶ. ಇನ್ನು ಜನರು ಸೌದೆಗೋಸ್ಕರವೋ, ಇನ್ನಾವುದೋ ಕಾರಣಕ್ಕೋ ಈ ಮರಕ್ಕೆ ಕೊಡಲಿ ಹಾಕಿದಿರಲೆಂದು ಇದರಲ್ಲಿ ದೇವಾನುದೇವತೆಗಳು ನೆಲೆಸಿರುತ್ತಾರೆಂಬ ಮಾತನ್ನು ಹರಿಬಿಟ್ಟು ಅವುಗಳನ್ನ ರಕ್ಷಿಸುವ ಕೆಲಸ ಮಾಡಿದ್ದಾರೆ. ಈ

ಮರಗಳು ಇಂದಿಗೂ ತನ್ನ ಕೆಲಸವನ್ನು ಅತ್ಯಂತ ಪ್ರಾಮಾಣಿಕವಾಗಿ ಮಾಡಿಕೊಂಡೇ ಬರುತ್ತಿವೆ. ಅರಳಿಮರ ಮತ್ತು ಬೇವಿನಮರ ಜೊತೆಯಲ್ಲಿದ್ದರೆ ನಿಜಕ್ಕೂ ಪೂಜೆಗೆ ಯೋಗ್ಯವೇ, ಅವುಗಳಲ್ಲಿ ದೇವರು ನೆಲೆಸಿರುವನೇ ಎಂಬೆಲ್ಲ ಪ್ರಶ್ನೆಗಳಿಗೆ ಉತ್ತರ ಸುಲಭ. ಅರಳೀಮರ ಆಮ್ಲಜನಕವನ್ನು ಕೊಟ್ಟರೆ, ಬೇವಿನಮರ ಅದಕೀಟು ಔಷಧಿಯ ಗುಣ ನೀಡುತ್ತದೆ. ಈ ಕಾರಣಕ್ಕೆ ಅರಳಿ, ಬೇವು ಒಟ್ಟಿಗಿದ್ದರೆ ಅವುಗಳನ್ನ ಜನ ದೇವರ ಸ್ಥಾನದಲ್ಲಿಟ್ಟು ಪೂಜಿಸಿ, ಪೋಷಿಸುವುದು.ಯುಗಾದಿ ಹಬ್ಬದಲ್ಲಿ ಬೇವು ಬೆಲ್ಲವನ್ನು ತಿನ್ನುವುದರಿಂದ ವರುಷವಿಡೀ ಕಷ್ಟ ಸುಖಗಳು ಸಮ ಪ್ರಮಾಣದಲ್ಲಿ ಬರುವುದರಿಂದ ವ್ಯಕ್ತಿಯು ಬದುಕಿನಲ್ಲಿ ಮಾಗಿ, ಬಾಗುತ್ತಾನೆ ಎನ್ನುವ ಮಾತುಗಳನ್ನು ಕೇಳಿದ್ದೇವೆ. ಬರೀ ಸುಖ ಬಂದರೆ ಹಿಗ್ಗಿ, ಬರೀ ಕಷ್ಟ ಬಂದರೆ ಕುಗ್ಗಿ ಹೋಗುತ್ತಾನೆ, ಇವೆರಡು ಸಮ ಪ್ರಮಾಣದಲ್ಲಿದ್ದರೆ ಒಳಿತೆಂದು ಹೇಳುತ್ತಾರೆ.ಆದರೆ ಬೇವಿಗೆ ಔಷಧಿಯ ಗುಣ ಇರುವುದರಿಂದ ಪ್ರತಿದಿನ ಬೇವಿನ ಚಿಗುರೊಂದನು ಸೇವಿಸುವುದರಿಂದ ಆರೋಗ್ಯಕ್ಕೆ ಒಳ್ಳೆಯದು, ಆದರೆ ಆದರ ರುಚಿ ಕಹಿ ಇರುವುದರಿಂದ ದಿನವೂ ತಿನ್ನುವುದಕ್ಕೆ ಜನರು ಇಷ್ಟ ಪಡರು, ಆ ಕಾರಣಕ್ಕೆ ವರುಷದಲ್ಲಿ ಒಂದು ದಿನವಾದರೂ ಎಲ್ಲರು ಕಡ್ಡಾಯವಾಗಿ ಸೇವಿಸಲೇಬೇಕೆಂದು ಹಬ್ಬದ ಹೆಸರಿನಲ್ಲಿ ತಂದಿರುವುದು. ಹಾಗೆಯೇ ಸಂಕ್ರಮಣ ಹಬ್ಬದಲ್ಲಿ ನಾವು ಎಳ್ಳು ಬೆಲ್ಲವನ್ನು ತಿನ್ನುವುದು. ಸಂಕ್ರಮಣದಿಂದ ಬೇಸಿಗೆ ಕಾಲದ ಆರಂಭ ಮತ್ತು ಗಾಳಿಯ ಅಬ್ಬರವೂ ಜೋರು ಹೀಗಿರುವಾಗ ದೇಹದ ತೊಗಲು ಅಲ್ಲಲ್ಲಿ ಬಿರುಕಾಗುತ್ತದೆ, ಹೀಗೆ ಬಿರುಕಾಗದಿರಲು ಆ ವೇಳೆಯಲ್ಲಿ ದೇಹಕ್ಕೆ ಜಿಡ್ಡಿನಂಶಬೇಕು. ಎಳ್ಳು,ಕೊಬ್ಬರಿ ಮತ್ತು ಬೆಲ್ಲವನ್ನು ತಿನ್ನುವುದರಿಂದ ಅವು ದೇಹಕ್ಕೆ ಬೇಕಾದ ಜಿಡ್ಡಿನಾಂಶವನ್ನು ಒದಗಿಸಿ, ಬಿರು ಬೇಸಿಗೆಯಲ್ಲಿ ನಮ್ಮ ದೇಹವನ್ನು ಕಾಪಾಡುತ್ತವೆ.

ಹಬ್ಬ ಹರಿದಿನಗಳಂತಹ ಶುಭಸಮಾರಂಭಗಳಲ್ಲಿ ಮನೆಯ ಬಾಗಿಲು, ಕಿಟಕಿಗಳಿಗೆ ಮಾವಿನೆಲೆಯ ತೋರಣ ಕಟ್ಟಿ, ಮನೆಯ ಜಂತಿಗಳಿಗೆ ಮಾವಿನೆಲೆ ಸಿಕ್ಕಿಸುವುದು ಎಲ್ಲರ ಮನೆಗಳಲ್ಲಿಯೂ ನೋಡ ಸಿಗುವ ಸಾಮಾನ್ಯವಾದ ದೃಶ್ಯವಾಗಿರುತ್ತದೆ. ಮಾವಿನೆಲೆ ತೋರಣ ಕಟ್ಟದೆ ಮಾಡುವ ಹಬ್ಬವು ಹಬ್ಬವೇ ಅಲ್ಲವೆನಿಸುವಷ್ಟರ ಮಟ್ಟಿಗೆ ನಮ್ಮಲ್ಲಿ ಈ ತೋರಣವು ತನ್ನ ಸ್ಥಾನವನ್ನು ಗಟ್ಟಿಗೊಳಿಸಿಕೊಂಡಿದೆ. ಹಾಗಾದರೆ ಹಬ್ಬಕ್ಕೆ ಮಾವಿನೆಲೆಯ ತೋರಣವನ್ನೇಕೆ ಕಟ್ಟುವುದು, ಬೇರೆ ವೃಕ್ಷಗಳ ಪತ್ರಗಳನ್ನೇಕೆ ಬಳಸುವುದಿಲ್ಲವೆಂಬ ಪ್ರಶ್ನೆಯನ್ನ ಬೆನ್ನು ಹತ್ತಿ ಹೊರಟಾಗ ಸಿಕ್ಕ ಉತ್ತರವಿದು. ಬೇರೆಲ್ಲ ವೃಕ್ಷಗಳ ಪತ್ರಗಳಿಗೆ ಹೋಲಿಸಿದರೆ ಮಾವಿನೆಲೆಗಳು ಮರದಿಂದ ಕಿತ್ತು ತಂದ ನಂತರವೂ ಹೆಚ್ಚಿನ ಪ್ರಮಾಣ ಆಮ್ಲಜನಕವನ್ನು ಬಿಡುಗಡೆಗೊಳಿಸುತ್ತವೆ. ಹಬ್ಬದ ದಿನಗಳಲ್ಲಿ ಮನೆಯಲ್ಲಿ ನೆಂಟರಿಷ್ಟರ ಸಂಖ್ಯೆ ಅಧಿಕವೇ ಇರುವುದರಿಂದ ಮನೆಯಲ್ಲಿ ಆಮ್ಲಜನಕದ ಕೊರತೆ ಉಂಟಾಗದಿರಲೆಂದು ಮಾವಿನ ಎಲೆಗಳಿಂದ ತೋರಣ ಕಟ್ಟುತ್ತಾರೆ. ಇದರ ತೋರಣವು ಹಬ್ಬ, ಹರಿದಿನ, ಉತ್ಸವಗಳಂತಹ ಶುಭ ಸಮಾರಂಭಗಳಿಗೆ ಮತ್ತಷ್ಟು ಮೆರುಗನ್ನು ತಂದುಕೊಡುವುದರ ಜೊತೆಗೆ ಆರೋಗ್ಯದ ವಿಚಾರದಲ್ಲಿಯೂ ಅನುಕೂಲವಾಗಿರುವುದರಿಂದ ಇಂದಿಗೂ ಬಳಕೆಯಲ್ಲಿದೆ.

ಬಸವಣ್ಣನವರು ತಮ್ಮ ವಚನದಲ್ಲಿ 'ಹೊಸಿಲಲ್ಲಿ ಹುಲ್ಲು ಹುಟ್ಟಿ, ಮನೆಯೊಳಗೆ ರಜ ತುಂಬಿ ಮನೆಯೊಳಗೆ ಮನೆಯೊಡೆಯ ಇದ್ದಾನೋ ಇಲ್ಲವೋ' ಎಂದು ಪ್ರಶ್ನೆ ಮಾಡುತ್ತಾರೆ. ದಿನದೊಡೆಯ ಉದಯಿಸಿದರು ಅಂಗಳವನ್ನು ಗುಡಿಸದೆ, ಬಾಗಿಲನ್ನ ಸಾರಿಸದೆ, ರಂಗೋಲಿಯನ್ನು ಹಾಕಿಲ್ಲವೆಂದರೆ ಮನೆಯಲ್ಲಿ ಮನೆಯ ಒಡೆಯನಿಲ್ಲ, ಇದ್ದರು ಅವರಿನ್ನೂ ಎದ್ದಿಲ್ಲವೆಂದು ತಿಳಿಯುತ್ತದೆ. ನಸುಕಿಗೆ ಏಳುವುದರಿಂದ ದಿನವು ದೊಡ್ಡದಿರುತ್ತದೆ, ಮುಂಜಾನೆಯ ತಂಗಾಳಿಗೆ ಮೊಗವೊಡ್ಡಿ ವಾಯುವಿಹಾರವೊಂದನ್ನು ಮುಗಿಸಿದರೆ ಇಡೀ ದಿನ ಉಲ್ಲಾಸದಿಂದ ಕೂಡಿರುತ್ತದೆ ಎನ್ನುವ ಹಿರಿಯರ ಅಭಿಪ್ರಾಯದಲ್ಲಿ ಸತ್ಯವಿದೆ. ಹಿಂದೆ ಮನೆಯಲ್ಲಿನ ಗೃಹಿಣಿಯರು ಹೊತ್ತು ಹುಟ್ಟುವುದಕ್ಕೆ ಮೊದಲೇ ಎದ್ದು, ಮುಂಬಾಗಿಲನ್ನು ಗುಡಿಸಿ, ಸಾರಿಸಿ, ರಂಗೋಲಿ ಹಾಕಿ, ಬಾಗಿಲನ್ನ ತೆರೆದಿಟ್ಟು, ಅಡುಗೆ ಕೆಲಸದಲ್ಲಿ ತೊಡಗಿಸಿಕೊಳ್ಳುತ್ತಿದ್ದರು. ಇದೇ ವೇಳೆಯಲ್ಲಿ ಗಂಡಸರು ಹಾಸಿಗೆಯಿಂದೆದ್ದು ಹೊಲಗದ್ದೆಗಳ ಕೆಲಸಕ್ಕೆ ಹೊರಡುತ್ತಿದ್ದರು. ಇನ್ನೂ ಮಕ್ಕಳು ಹೊತ್ತು ಹುಟ್ಟಿದೊಡನೆ ಹಾಸಿಗೆ ಬಿಟ್ಟು ಮೇಲೆಳಲೇಬೇಕು. ಎದ್ದವು, ಮನೆಗೆಲಸ, ಒದು

ಬರಹಗಳಲ್ಲಿ ತೊಡಗಿಸಿಕೊಳ್ಳುತ್ತಿದ್ದರು. ಹೀಗಿರುವಾಗ ತೆರೆದಿಟ್ಟ ಮುಂಬಾಗಿಲಿನಿಂದ ಹಾವು, ಹಲ್ಲಿಯಂತವು ಹೊಸಿಲು ದಾಟಿ ಮನೆಯೊಳಗೆ ಬಂದರೆ, ಅವುಗಳಿಂದಾಗುವ ಅಪಾಯವನ್ನು ತಪ್ಪಿಸಿ, ಎಚ್ಚರಿಸಲು ಈ ರಂಗೋಲಿ ಸಹಾಯವಾಗುತಿತ್ತು. ಹಾವು ಚೇಳಿನಂತವು ಬಾಗಿಲನ್ನು ದಾಟಿ ಮನೆಯೊಳಗೆ ಬರುವ ಮುನ್ನ ಬಾಗಿಲಿನ ಮುಂದಿರುವ ರಂಗೋಲಿಯನ್ನ ದಾಟಿಯೇ ಬರಬೇಕು, ಹಾಗೆ ದಾಟಿ ಬರುವಾಗಿನ ಅದರ ಹೆಜ್ಜೆ ಗುರುತುಗಳು ತೊಪ್ಪೆ ಸಾರಿಸಿದ ನೆಲದ ಮೇಲೆ ಮೂಡಿರುತ್ತದೆ. ಮುಂದಾಗುವ ಅಪಾಯದಿಂದ ಎಚ್ಚೆತ್ತುಕೊಳ್ಳಲು ಅನುಕೂಲವಾಗುತ್ತದೆನ್ನುವ ಕಾರಣಕ್ಕಾಗಿಯೇ ಮನೆಯ ಮುಂದಿನ ಬಾಗಿಲಿಗೆ ರಂಗೋಲಿ ಹಾಕುವುದೆನ್ನುವುದಕ್ಕೆ ಇದು ಉತ್ತಮ ಉದಾಹಾರಣೆಯಾಗಿದೆ. ಬಾಗಿಲನ್ನ ಒರಸಿ ದಿನವೂ ಅರಿಶಿನವನ್ನು ಹಚ್ಚುವುದನ್ನು ನೋಡಿದ್ದೇವೆ. ಪೂಜೆ ಮಾಡುವ ನೆಪದಲ್ಲಿ ಮರದ ಬಾಗಿಲಿಗೆ ದಿನವು ನೀರನ್ನು ಹಾಕುವುದರಿಂದ ಗೆದ್ದಲು ಹಿಡಿಯದಿರಲೆಂದು ಅರಿಸಿನವನ್ನು ಬಳಿಯುತ್ತಾರೆ. ಮದುವೆಯ ಒಂದೆರಡು ದಿನ ಮುಂಚಿತವಾಗಿ ವಧು ವರರಿಗೆ ಅರಿಶಿನದ ನೀರು ಹಾಕುವುದು, ಆ ಇಬ್ಬರಲ್ಲಿ ಯಾರಿಗಾದರೂ ತೊಗಲಿಗೆ ಸಂಬಂಧ ಪಟ್ಟ ತೊಂದರೆಗಳಿದ್ದರೆ ಮದುವೆಯಾದ ನಂತರ ಒಬ್ಬರಿಂದ ಒಬ್ಬರಿಗೆ ಹರಡದೆ ಇರಲೆಂದು ಮೈಗೆಲ್ಲ ಅರಿಶಿನವನ್ನು ಹಚ್ಚಿ,ಸ್ನಾನ ಮಾಡಿಸುತ್ತಾರೆ. ಮಾಂಗಲ್ಯ ಧಾರಣೆಯ ಸಮಯದಲ್ಲಿ ಅಕ್ಷತೆ ಹಾಕುವಾಗ ಅರಿಶಿನ ಬೆರೆಸಿದ ಅಕ್ಕಿಯನ್ನೇ ವಧು ವರರ ಮೇಲೆ ಎರಚುವುದು. ಇಲ್ಲಿ ಅಕ್ಷತೆ ಎಂದರೆ ಅರಿಶಿನ ಬೆರೆಸಿದ ಅಕ್ಕಿಯೆಂದಲ್ಲ, ಅಕ್ಷತೆ ಎಂದರೆ ಅಕ್ಕಿಯಷ್ಟೇ, ಅಕ್ಷತೆ ಎರಚುವವರ ಕೈಗಳಲ್ಲೇನಾದರು ವ್ಯಾಧಿಗಳಿದ್ದರೆ ಅವು ವಧುವರರ ಮೈಮೇಲೆ ಬಿದ್ದಾಗ, ಅದರಿಂದ ತೊಂದರೆಯಾಗದಿರಲೆಂಬ ಕಾರಣಕ್ಕೆ ಈ ಅಕ್ಕಿಗೆ ಅರಿಶಿನ ಬೆರೆಸಿ ಎರಚುವ ಮುನ್ನೆಚ್ಚರಿಕೆಯ ಕ್ರಮ ಇದಾಗಿದೆ.

ಯಾರದೇ ಮನೆಯಲ್ಲಿ ಸಾವು ಸಂಭವಿಸಿದೊಡನೆ ಮನೆಯ ಮುಂದೆ ಒಂದೆರಡು ಕೊಂಟುಕೊರಡುಗಳಿನ್ನಿಟ್ಟು ಬೆಂಕಿ ಹತ್ತಿಸುವ ರೂಢಿಯು ಬಹು ಹಿಂದಿನಿಂದಲೂ ಚಾಲ್ತಿಯಲ್ಲಿದೆ. ಸತ್ತವನ ಮನೆಯ ಮುಂದೆ ಹೊಗೆ ಹಾಕುವುದು ಸಾವು ಅಪಶಕುನವೆಂದು ಹೇಳುವ ಸಲುವಾಗಿಯೇ ಎನ್ನುವ ಪ್ರಶ್ನೆಗಳು ಏಳದಿರುವುದಿಲ್ಲ. ಇಂತಹ ಶಕುನ, ಅಪಶಕುನದ ಮಾತನ್ನು ವಿಜ್ಞಾನವು ನಿರಾಕರಿಸುತ್ತದೆ. ವ್ಯಕ್ತಿಗೆ ಸಾವು ಸಂಭವಿಸಿದ ಕೆಲವೇ ನಿಮಿಷಗಳಲ್ಲಿ ಆತನ ದೇಹವು ಬ್ಯಾಕ್ಟೀರಿಯಗಳಿಗೆ ತುತ್ತಾಗಿ ಕೊಳೆಯಲಾರಂಭಿಸುತ್ತದೆ. ಇದರಿಂದಾಗಿ ಶವದ ಸುತ್ತಮುತ್ತ ಕುಳಿತವರಿಗೆ ತೊಂದರೆಯಾಗುವ ಸನ್ನಿವೇಶಗಳೇ ಅಧಿಕವಾಗಿರುತ್ತದೆ, ಆ ಕಾರಣಕ್ಕಾಗಿಯೇ ಸತ್ತವನ ಬಾಯಿಗೆ ಅಕ್ಕಿ ಮತ್ತು ಮೂಗಿನ ಹೊಳ್ಳೆಗಳಿಗೆ ಅರಳೆ ತುಂಬಿ ಕ್ರಿಮಿಕೀಟಗಳು ದೇಹದ ಒಳಕ್ಕೆ ಪ್ರವೇಶ ಮಾಡದಿರುವಂತೆ ನೋಡಿಕೊಳ್ಳುತ್ತಾರೆ. ಮೃತದೇಹದ ಸುತ್ತಮುತ್ತ ಕ್ರಿಮಿಕೀಟಗಳು ಸುಳಿಯದಿರಲೆಂದು ಕೊಂಟುಕೊರಡುಗಳಿಗೆ ಬೆಂಕಿ ಹಚ್ಚಿ, ಹೊಗೆಯಾಡುವಂತೆ ನೋಡಿಕೊಳ್ಳುತ್ತಾರೆ.

ಹೀಗೆ ರಾತ್ರಿಯೆಲ್ಲ ಹೊಗೆಯುಗುಳುತ್ತಿದ್ದ ಕೊಂಟಿಗೆ ಬೆಳಗಾದೊಡನೆ ಮೂರು ಕಲ್ಲಗಳನ್ನು ಅಕ್ಕಪಕ್ಕದಲ್ಲಿ ಜೋಡಿಸಿ ಅಂಡೆಯೊಂದರಲ್ಲಿ ಬಿಸಿನೀರನ್ನು ಕಾಯಿಸಿ, ಶವದ ಪೂಜೆಗೂ ಮುನ್ನ ಸ್ನಾನ ಮಾಡಿಸುತ್ತಾರೆ.ಇದೇಕೆ ಸತ್ತ ವ್ಯಕ್ತಿಗೆ ಬಿಸಿನೀರಿನಲ್ಲಿ ಸ್ನಾನ ಮಾಡಿಸುವುದು ಎಂದು ಕೇಳಿದಾಗ ಜನರೆನ್ನುವುದು ಮೃತದೇಹವು ಕೂಡ ದೇವರಿದ್ದಂತೆ, ಅದನ್ನು ಸಂಸ್ಕಾರ ಮಾಡುವ ಮುನ್ನ ಅದಕ್ಕೆ ಸ್ನಾನ, ಪೂಜೆ ಮಾಡಿಸಿಯೇ ಕಳುಹಿಸಿಕೊಡಬೇಕು, ಅದು ನಮ್ಮ ಸಂಪ್ರದಾಯವೆಂದು ಹೇಳುತ್ತಾರೆ.ಆದರೆ ವಸ್ತುಸ್ಥಿತಿ ಬೇರೆಯೇ ಇದೆ, ಮರಣ ಹೊಂದಿದ ನಂತರ ಶವದ ಕೈಕಾಲುಗಳು ಸೆಟೆದುಕೊಂಡಿರುತ್ತವೆ. ಅವುಗಳನ್ನ ಹಾಗೆಯೇ ಬಿಟ್ಟರೆ ಚಟ್ಟದ ಮೇಲೆ ಮಲಗಿಸಿದಾಗ ಕೈಕಾಲುಗಳು ಚಟ್ಟದಿಂದ ಹೊರಚಾಚಿಕೊಳ್ಳುತ್ತವೆ, ಆ ಕಾರಣಕ್ಕಾಗಿ ಮರಣ ಹೊಂದಿದ ಕೂಡಲೇ ಕೈಕಾಲುಗಳನ್ನ ಮಡಿಸುವುದು. ಹಾಗಿದ್ದರೂ ಕೆಲವೊಮ್ಮೆ ಸರಿಯಾಗಿ ಮಡಿಸಿಕೊಂಡಿರುವುದಿಲ್ಲ, ಪೂಜೆಯ ಹೆಸರಿನಲ್ಲಿ ಬಿಸಿನೀರಿನ ಸ್ನಾನ ಮಾಡಿಸಿದರೆ ಜಾಯಿಂಟ್ಗಳು ಫ್ರೀಯಾಗಿ, ಮಡಿಸಲು ಸುಲಭವಾಗುತ್ತವೆ ಎನ್ನುವ ಕಾರಣಕ್ಕೆ ಈ ಬಿಸಿನೀರಿನ ಜಳಕವೇ ಹೊರತು ಬೇರಿನ್ನಾವ ಕಾರಣವಿಲ್ಲ. 'ಸತ್ತವನ ತಿಕ ಎತ್ತೋರೆ' ಎನ್ನುವ ಗಾದೆಯಂತೆ, 'ಊರು ಉಪಕಾರ ಅರಿಯದು,ಹೆಣ ಸಿಂಗಾರ ಅರಿಯದು' ಎನ್ನುವ ಮತ್ತೊಂದು ಗಾದೆಯು ಇದನ್ನೇ ಹೇಳುತ್ತಿರುವುದು.ಸತ್ತವನಿಗೆ

ಯಾವ ಸೋಪಿನಲ್ಲಿ ಜಳಕ ಮಾಡಿಸಿದರೇನು, ಎಂತಹ ವಸ್ತ್ರವನ್ನುಡಿಸಿ ತೊಡಿಸದರೇನು ಅವನಿಗದು ತಿಳಿಯುವುದೇ, ಎಷ್ಟೇ ಅಲಂಕಾರ ಮಾಡಿದರು ಅದು ನಿರುಪಯುಕ್ತ ಎನ್ನುವ ಮಾತೇ ಅಂತಿಮ ಸತ್ಯವಿಲ್ಲಿ.

ಇನ್ನು ಶವ ಸಂಸ್ಕಾರಕ್ಕೆ ಹೋದವರು ಅದನ್ನು ಮುಗಿಸಿ ಮನೆಗೆ ಬಂದೊಡನೆ ಯಾರಿಂದಲೂ ಮುಟ್ಟಿಸಿಕೊಳ್ಳುವುದಿಲ್ಲ, ಮೃತದೇಹದ ಹತ್ತಿರದಲ್ಲಿ ಓಡಾಟ ಮಾಡಿರುವುದರಿಂದ ಬ್ಯಾಕ್ಟೀರಿಯಗಳು ಅವರ ಬಟ್ಟೆ ಮತ್ತು ದೇಹಕ್ಕೆ ಅಂಟಿರಬಹುದು. ಆ ಕಾರಣಕ್ಕೆ ತಾವು ಉಟ್ಟ ಬಟ್ಟೆಬರೆಗಳನ್ನೆಲ್ಲ ಪ್ರತ್ಯೇಕವಾಗಿಟ್ಟು, ಇಲ್ಲವೇ ಸ್ನಾನದ ಮೊದಲು ತೊಳೆದು ಹಾಕಿ, ಕೂಡಲೇ ಸ್ನಾನ ಮುಗಿಸಿ ಬರುತ್ತಾರೆ. ನಂತರ ಊಟ ಮಾಡಿ, ನಿದ್ರೆಗೆ ಶರಣಾಗುತ್ತಾರೆ. ನಿದ್ರೆಯಿಂದ ಎಚ್ಚೆತ್ತ ಮೇಲೆ ಅವರ ಮೈಮನಸ್ಸುಗಳೆರಡು ಹಗುರವಾಗಿ ಆ ದುಃಖದಿಂದ ನಿಧಾನವಾಗಿ ಹೊರಬರಲು ಸಹಾಯ ಮಾಡುತ್ತದೆ. ಸಹಜವಾಗಿ ಶವ ಸಂಸ್ಕಾರ ಮುಗಿಸಿ ಬರುವವರ ಮಾತುಗಳನ್ನ ಕೇಳಿಸಿಕೊಳ್ಳಿ, ಜೀವನವೆಂದರೆ ಇಷ್ಟೇ, ಇಷ್ಟಕೇಕೆ ಈ ಹಾರಾಟ ಸತ್ತ ಮೇಲೆ ಯಾರು ಏನನ್ನು ಹೊತ್ತು ಹೋಗುವುದಿಲ್ಲ, ಎಲ್ಲವನ್ನು, ಎಲ್ಲರನ್ನು ಬಿಟ್ಟೇ ಹೋಗುವ ಈ ಮೂರು ದಿನದ ಬಾಳಿಗೆ ಎಲ್ಲವೂ ಬೇಕೆಂದು ಏಕೆ ಹೊಡೆದಾಡಬೇಕೆನ್ನುವ ಮಾತುಗಳು ಕೇಳಿ ಬರುತ್ತಿರುತ್ತವೆ. ಇವೆಲ್ಲವೂ ವೈರಾಗ್ಯದ ಮಾತುಗಳು, ಈ 'ವೈರಾಗ್ಯಕ್ಕೆ ಶ್ಮಶಾನ ವೈರಾಗ್ಯವೆನ್ನುವರು'. ಇದೆಲ್ಲವೂ ಜಳಕ ಮಾಡಿ, ಊಟ, ನಿದ್ರೆಯನ್ನು ಮುಗಿಸಿ, ಎಚ್ಚೆತ್ತೊಡನೆ ಮುಗಿಯಿತು. ಯಾವುದು ಬೇಡೆವೆಂದು ವೈರಾಗ್ಯದ ಮಾತುಗಳನ್ನ ಆಡಿದ್ದರೋ ಅವುಗಳಿಗಾಗಿಯೇ ಮತ್ತೆ ಬಡಿದಾಟ ಶುರುವಾಗುತ್ತದೆ. ಇಲ್ಲಿ ತಿಳಿದುಕೊಳ್ಳಬೇಕಾದ ವಿಚಾರವಿಷ್ಟೇ ಪ್ರತಿಯೊಬ್ಬ ವ್ಯಕ್ತಿಯೊಳಗೊಬ್ಬ ಸಾಧು, ಸಂತ, ಪರಮ ವೈರಾಗಿ ಇದ್ದೇ ಇರುತ್ತಾನೆ,ಅವನು ಇಂತಹ ಸಮಯವನ್ನು ನೋಡಿ ಹೊರಬಂದು, ಆತನಿಂದ ವೈರಾಗ್ಯದ ಮಾತುಗಳನ್ನಾಡಿಸಿ ಹೋಗುತ್ತಾನೆ.

ನಾನು ಚಿಕ್ಕವನಿದ್ದಾಗ ಹೊಲ,ಗದ್ದೆಗಳ ಕೆಲಸ ಮಾಡಲೆಂದು ಬರುತ್ತಿದ್ದವರಿಗೆ ಊಟ ಹೊತ್ತು ಹೋಗುವ ಅಮ್ಮನ ಸೆರಗಿಡಿದು ಹಿಂಬಾಲಿಸಿ ಹೋಗುತ್ತಿದ್ದೆನು. ಹೊಲದ ಬದುವಿನಲ್ಲಿ ಹೊತ್ತ ಬುಟ್ಟಿಯನ್ನ ಇಳಿಸುತ್ತಿದ್ದ ಅಮ್ಮ, ಕೆಲಸ ಮಾಡುತ್ತಿದ್ದವರನ್ನ ಊಟಕ್ಕೆ ಕರೆಯುತ್ತಿದ್ದಳು. ಕರೆ ಬಂದೊಡನೆ ಕೆಲಸಕ್ಕೆ ತಡೆಹಾಕಿ ಬರುತ್ತಿದ್ದ ಆಳುಮಕ್ಕಳು, ಗುಂಡಿಗಳಲ್ಲಿ ನಿಂತ ಮಳೆ ನೀರನಲ್ಲೇ ಮುಖಮಜ್ಜನ ಪೂರೈಸಿ, ಮುತ್ತುಗದ ಮರದಿಂದ ನಾಲ್ಕಾರು ಅಗಲವಾದ ಮುತ್ತುಗದ ಎಲೆಗಳನ್ನ ಕಿತ್ತು ತಂದು ಬದುವಿನಲ್ಲೇ ಸಾಲಾಗಿ ಊಟಕ್ಕೆ ಕುಳಿತು ಬಿಡುತ್ತಿದ್ದರು. ನೀರಿನಿಂದ ಎಲೆಗಳನ್ನು ತೊಳೆದ ನಂತರ ಬೊಗಸೆಯಲೊಂದಿಷ್ಟು ನೀರನ್ನು ತೆಗೆದುಕೊಂಡು ಎಲೆಯ ಸುತ್ತಲ ಮಣ್ಣಿಗೆ ಹಾಕಿಕೊಳ್ಳುತ್ತಿದ್ದರು. ಊಟ ಮಾಡುವ ಮೊದಲು ಒಂದಿಷ್ಟು ಅನ್ನದಗುಳುಗಳನ್ನ ಎತ್ತಿಕೊಂಡು ಕಣ್ಣಿಗೆ ಒತ್ತಿಕೊಂಡು ನಾಲ್ಕು ದಿಕ್ಕಿಗೂ ಚಲ್ಲುತ್ತಿದ್ದರು.ಇದೆಲ್ಲ ಯಾಕೆಂದು ತಿಳಿಯದ ನಾನು ಮಿಕಮಿಕನೆ ನೋಡುತ್ತಿದ್ದೆನು. ಈ ವಿಷಯವಾಗಿ ಗೆಳೆಯ ದಿಲೀಪ್ ಭಟ್ಟರೊಂದಿಗೆ ಮಾತುಕತೆಯಾಡುವಾಗ ಅದರ ನಿಜ ಸ್ವರೂಪದ ಅರಿವಾಯಿತು. ಹಳ್ಳಿಗರಲ್ಲಿನ ಕೆಲವು ಆಚರಣೆಗಳು ದಿನನಿತ್ಯದ ಅಭ್ಯಾಸಗಳಂತ್ತಿದ್ದು, ಅವಕ್ಕೆ ಅವರಲ್ಲಿ ಕಾರಣಗಳಿಲ್ಲ. ತನ್ನ ಮುಂದಿರುವ ಎಲೆಯಲ್ಲಿನ ಅನ್ನದ ಒಂದಿಷ್ಟನ್ನ ಭೂತಾಯಿಗೆ ನೈವೇದ್ಯದ ರೂಪದಲ್ಲಿ ಕೊಟ್ಟು, ಊಟ ಮಾಡುವ ಪದ್ಧತಿಯನ್ನ ಅವರು ತಲೆಮಾರುಗಳಿಂದಲೂ ನಡೆಸಿಕೊಂಡು ಬಂದಿದ್ದಾರೆ, ಇದಷ್ಟೇ ಅವರಿಗೆ ಗೊತ್ತಿರುವ ಸತ್ಯ. ಅದಕ್ಕೆ ಅಲ್ಲವೆ ಜನಪದರು" ಬೆಳಗಾಗಿ ನಾನೆದ್ದು ಯಾರು ಯಾರ ನೆನೆಯಾಲಿ, ಎಳ್ಳು ಜೀರಿಗೆ ಬೆಳೆಯೋಳ ಭೂಮ್ತಾಯ ಎದ್ದೊಂದು ಗಳಿಗೆ ನೆನೆದೆನಾ " ಎಂಬ ಪದವನ್ನು ಕಟ್ಟಿ ದಿನವೂ ಮುಂಜಾನೆ ಆಕೆಯನ್ನ ನೆನೆದೆ ಬದುಕನ್ನ (ಕೆಲಸ )ಆರಂಭ ಮಾಡುವುದು. ದಿಲೀಪ್ ಭಟ್ಟರು ಕೊಟ್ಟ ಕಾರಣವಿಲ್ಲಿ ಬೇರೆಯೇ ಇತ್ತು, ಊಟ ಮಾಡುವ ಮೊದಲು ಎಲೆಯ ಸುತ್ತ ನೀರನ್ನ ಹಾಕಿ ನೆನೆಸುವುದು ತನ್ನ ಎಲೆಯ ಸುತ್ತ ಹರಿದಾಡುವ ಇರುವೆಯಂತಹ ಸಣ್ಣ ಜೀವಿಗಳು ಆ ನೆನೆದ ಸ್ಥಳವನ್ನ ದಾಟಿ, ಊಟದ ಎಲೆಯನ್ನ ಏರದಿರಲೆಂದು. ಊಟಕ್ಕೂ ಮೊದಲು ಒಂದಿಷ್ಟು ಅನ್ನವನ್ನ ತನ್ನ ಸುತ್ತ ಚೆಲ್ಲುವುದು, ತನ್ನ ಸುತ್ತಲಿರುವ ಇಂತಹ ಜೀವಿಗಳಿಗೆ ಅವು ಇರುವ ಸ್ಥಳದಲ್ಲೇ ಆಹಾರ ಸಿಕ್ಕರೆ, ಅವು ಇವನ ಊಟದ ಎಲೆಯತ್ತ ಬರುವ ಪ್ರಯತ್ನವನ್ನು ಮಾಡುವುದಿಲ್ಲವೆಂಬ ವಿಚಾರ ಹೇಳಿದಾಗ

ನಿಜಕ್ಕೂ ಅಚ್ಚರಿಯಾಯಿತು. ಮುಗ್ಧತೆಯಲ್ಲಿನ ತನ್ನ ಆಚರಣೆಯೊಳಗೆ ಇನ್ನೊಂದು ಜೀವಿಯ ಹಸಿವನ್ನು ನೀಗಿಸುವ ಮಹಾದ್ದುದ್ದೇಶವಿಟ್ಟುಕೊಂಡ ಹಳ್ಳಿಗರ ಆ ಮನಸ್ಸು ನಿಜಕ್ಕೂ ದೊಡ್ಡದಲ್ಲವೇ. ಇನ್ನೊಬ್ಬರ ಪಾಲಿನ ಅನ್ನವನ್ನು ಕಬಳಿಸಿ ಬದುಕುವ ಈ ಕಾಲದಲ್ಲಿ, ತನ್ನಂತೆ ಇನ್ನೊಂದು ಜೀವಿಗೂ ಹಸಿವಿದೆಯೆಂದು ತಿಳಿದು ಬದುಕುವ ಆ ಬದುಕೆಷ್ಟು ಸುಂದರವೆನಿಸುತ್ತದೆ.

ಆಕಾಶದಲ್ಲಿ ಸಗ್ಗ ಮತ್ತು ನರಕವೆಂಬ ಎರಡು ವಿಭಾಗಗಳಿದ್ದು, ಇಲ್ಲಿ ತೀರಿಕೊಂಡವರು ನೇರವಾಗಿ ಅಲ್ಲಿಗೆ ಹೋಗುತ್ತಾರಂತೆ, ಅಲ್ಲಿ ಯಮನೆಂಬ ಅಧ್ಯಕ್ಷನು ಇವರ ಪಾಪಪುಣ್ಯಗಳನ್ನು ಲೆಕ್ಕ ಹಾಕಿ ಕೆಲವರನ್ನು ಸಗ್ಗಕ್ಕೂ ಮತ್ತೆ ಕೆಲವರನ್ನ ನರಕಕ್ಕೆ ಕಳುಹಿಸುತ್ತಾನೆ. ಸಗ್ಗಕ್ಕೆ ಹೋದವರು ಒಳ್ಳೆಯ ಕೆಲಸವನ್ನು ಮಾಡಿ ಜನರ ಮನದಲ್ಲೂ ಮೆಚ್ಚುಗೆ ಪಡೆದವರು. ನರಕಕ್ಕೆ ಹೋಗುವವರು ಯಮನ ಮುಂದಾಳತ್ವದಲ್ಲಿ ಕರೆದ ಸಭೆಯಲ್ಲಿ ಹಾಜರಾಗಲೇಬೇಕು. ಇಹಲೋಕದಲ್ಲಿ ಎಸಗಿದ ಅನಾಚಾರಗಳ ಲೆಕ್ಕಾಚಾರವನ್ನು ಚಿತ್ರಗುಪ್ತ ಓದಿ, ಯಮನಿಗೆ ಒಪ್ಪಿಸಿದ ಮೇಲೆ, ಅವನು ಇವರ ಪಾಪಗಳ ಲೆಕ್ಕ ಹಾಕಿ, ಶಿಕ್ಷೆಯ ಪ್ರಮಾಣವನ್ನು ಪ್ರಕಟಿಸುತ್ತಾನೆ. ಹಾಗಾದರೆ ಸತ್ತವರು ಮೇಲೆ ಬಾಲ್ಕನಿಯಂತಿರುವ ಮೇಲಿನ ಲೋಕಕ್ಕೆ ಹೋಗುವರೇ, ಈ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವುದು ಕಷ್ಟದ ಕೆಲಸವೇ ಅನಿಸುತ್ತದೆ. ದೇಹ ನಶ್ವರ, ಆತ್ಮ ಅಮರವೆನ್ನುವ ಮಾತು ನಮ್ಮಲ್ಲಿದೆ. ಆದರೆ ವಿಜ್ಞಾನದ ಪ್ರಕಾರ ಯೋಚಿಸಿದರೆ ಸತ್ತವನ ಆತ್ಮ ಎಲ್ಲಿಗೆ ಹೋಗುತ್ತದೆಯೆಂದು ಇಲ್ಲಿಯ ತನಕವೂ ಯಾರಿಗೂ ತಿಳಿದಿಲ್ಲ, ಆದರೆ ಸತ್ತವನ ದೇಹ ಮಾತ್ರ ಮಸಣಕ್ಕೆ ಹೋಗಿಯೇ ಹೋಗುತ್ತದೆ. ಅಲ್ಲಿ ಮಣ್ಣನ್ನು ಸೇರಿ ಕೊಳೆತೋ, ಇಲ್ಲವೇ ಬೆಂಕಿಯಲ್ಲಿ ಬೆಂದು ಬೂದಿ, ಹೊಗೆಯ ರೂಪವನ್ನ ಕಂಡೇ ಕಾಣುತ್ತದೆ. ಅಲ್ಲಿಗೆ ದೇಹವು ಕೊಳೆತು ಗೊಬ್ಬರವಾಗಿ, ಇಲ್ಲವೇ ಬೂದಿ, ಹೊಗೆಯಾಗಿ ಬದಲಾಗಿ ನಶ್ವರವಾಗದೆ ಅಮರವಾಗುಳಿಯುತ್ತದೆ. ಒಂದು ವಸ್ತುವನ್ನು ಸೃಷ್ಟಿ ಮಾಡುವುದಾಗಲಿ, ನಾಶ ಮಾಡುವುದಾಗಲಿ ಸಾಧ್ಯವೇ ಇಲ್ಲವೆಂದು ವಿಜ್ಞಾನ ಹೇಳಿಕೊಂಡೇ ಬಂದಿದೆ.

ಮನುಷ್ಯ ಜೀವಿಗೆ ಮಾತ್ರ ಹೀಗೆ ಸಗ್ಗ ನರಕದ ಕಲ್ಪನೆ ಇರುವುದಾದರೆ ಈ ಮನುಷ್ಯ ಪ್ರಪಂಚದಲ್ಲಷ್ಟೇ ಒಳ್ಳೆಯದು, ಕೆಟ್ಟದ್ದು ಇದೆಯೆಂದಲ್ಲವೇ. ಪ್ರಾಣಿ ಪ್ರಪಂಚದಲ್ಲಿನ ಜೀವ ವೈವಿಧ್ಯಗಳಲ್ಲಿ ಮನುಷ್ಯನು ಜೀವವೈವಿಧ್ಯವಷ್ಟೇ ಹೊರತು, ಎಲ್ಲ ಜೀವಿಗಳ ನಿಯಂತ್ರಕ ಈ ಮನುಷ್ಯನಲ್ಲ. ಆದರೂ ಮನುಷ್ಯ ಮಾತ್ರ ತಾನು ನಿಯಂತ್ರಕನೆಂದುಕೊಂಡೇ ಬದುಕುತ್ತಿದ್ದಾನೆ. ಪ್ರಾಣಿಪ್ರಪಂಚದಲ್ಲಿ ಅಂದರೆ ಮಾನವ ಜೀವಿಯನ್ನುಳಿದಂತೆ ಉಳಿದೆಲ್ಲವುಗಳಿಗೆ ಪಾಪಪುಣ್ಯಗಳ ಸಂಕೋಲೆಯ ಬಲೆಯಿಲ್ಲ. ಅಲ್ಲಿ ದೇವರಿಲ್ಲ ಎಂದಾಯಿತು. ಮನುಷ್ಯ ಜೀವಿ ಈ ಜಗದಲ್ಲಿ ಅವತರಿಸಿ, ಅವನು ಇಲ್ಲಿಯ ಎಲ್ಲದರ ಮೇಲೆ ನಿಯಂತ್ರಣ ಸಾಧಿಸಲು ಹೊರಟಾಗ ಹುಟ್ಟಿಕೊಂಡದ್ದೇ ಈ ಪಾಪಪುಣ್ಯದ ಕಲ್ಪನೆಗಳು. ಕಾನೂನು ಕಟ್ಟಲೆಗಳಿಗೆ ಹೆದರದಿರುವ ಮನುಷ್ಯರು ಇಂದು ಇರುವಂತೆ ಅಂದೂ ಇದ್ದರು. ತಾವು ಮಾಡುವ ಪಾಪಗಳಿಗೆ ಕಾನೂನಿನಲ್ಲಿ ಶಿಕ್ಷೆಯಾಗದಂತೆ ಹೇಗೆ ತಪ್ಪಿಸಿಕೊಳ್ಳಬೇಕೆಂದು ಚನ್ನಾಗಿಯೇ ಗೊತ್ತಿತ್ತು, ಅಂತವರನ್ನು ದೇವರು ದಿಂಡಿರು, ಇಹ – ಪರ, ಪಾಪ – ಪುಣ್ಯದ ಹೆಸರಿನಲ್ಲಿ ನಿಯಂತ್ರಣದಲ್ಲಿ ಇಡಲೆಂದೇ ಹುಟ್ಟಿಕೊಂಡ ಸೊಗಸಾದ ಕಲ್ಪನೆಯಿದು. ಬದುಕಿದ್ದಾಗ ಗೊತ್ತಿರದೆ ಮಾಡಿದ ಪಾಪಗಳಿಗೆ ಕ್ಷಮೆ ಇದೆ, ಆದರೆ ಬೇಕೆಂದೇ ಮಾಡುವ ಪಾಪಗಳಿಗೆ ಕ್ಷಮೆ ಇಲ್ಲ, ಇಂತಿಂತ ಪಾಪಗಳಿಗೆ ಇಂತಿಂತ ಶಿಕ್ಷೆಗಳಿವೆ ಎಂದು ಗರುಡಪುರಾಣದಂತಹ ಕೃತಿಗಳಲ್ಲಿ ಪಟ್ಟಿ ಮಾಡಿ ಕೊಡಲಾಗಿದೆ. ಇದೊಂದು ರೀತಿಯಲ್ಲಿ ನೈತಿಕ ಕಾನೂನುಗಿರಿ ಎಂದರೂ ಸರಿಯೇ ಆದೀತು. ಇಂತಹ ವಿಚಾರಗಳನ್ನ ನಾವು ಚಿಕ್ಕವರಿದ್ದಾಗಲೇ ಮನೆಯಲ್ಲಿ ಹಿರಿಯರು ನಮ್ಮ ತಲೆಗೆ ತುಂಬಿ, ಬದುಕನ್ನು ಕೆಡುಕಿನತ್ತ ಸಾಗಲು ಬಿಡದೆ ಒಳಿತಿನತ್ತ ಎಳೆತರುವ ಪ್ರಯತ್ನ ಮಾಡುತ್ತಾರೆ. ಆರೋಗ್ಯಕರ ಸಮಾಜವನ್ನು ಕಟ್ಟಲು ಕುಟುಂಬದಲ್ಲಿನ ಹಿರಿಯರು ಕೈಜೋಡಿಸಿ ನಿಂತಿರುವುದು ಇಲ್ಲಿ ಎದ್ದು ಕಾಣುತ್ತದೆ.

ಗಂಡುಮಕ್ಕಳು ಸೊಂಟಕ್ಕೆ ಕಪ್ಪುಬಣ್ಣದ ದಾರವೊಂದನ್ನ ಒಂದೆರಡು ಎಳೆಗಳಾಗಿ ಕಟ್ಟಿಕೊಳ್ಳುವುದು ವಾಡಿಕೆಯಾಗಿ ಬಂದಿದೆ, ಇದನ್ನೇ ಉಡುದಾರವೆಂದು ಕರೆದಿದ್ದಾರೆ. ಉಡುವ + ದಾರ = ಉಡುವದಾರ, ಉಡುದಾರವಾಗಿದೆ, ಉಡುವ ಎಂದರೆ ಧರಿಸುವುದು ಎಂದು ತಿಳಿಯುತ್ತದೆ, ಇದೇ ಇನ್ನೊಂದಿಷ್ಟು ವಿಸ್ತೃತ

ರೂಪ ಪಡೆದು ಜನಿವಾರ, ಶಿವದಾರಗಳಾಗಿರುವುದು.ಇದನ್ನು ಕಡ್ಡಾಯವಾಗಿ ಗಂಡು ಮಕ್ಕಳು ಧರಿಸಿಯೇ ಧರಿಸಿರುತ್ತಾರೆ. ಹಾಗೊಂದು ವೇಳೆ ಸೊಂಟದಲ್ಲಿ ಉಡುದಾರವಿಲ್ಲದಿರುವುದು ಕಂಡು ಬಂದರೆ ಅವನನ್ನು ಹಳ್ಳಿಗರು 'ಉಡುದಾರವಿಲ್ಲದ ಬಡದಾಸನೆಂದು' ಕರೆದು ತಮಾಷೆ ಮಾಡುವುದು ಇದೆ. ಅತೀ ಕಡಿಮೆ ಬೆಲೆಗೆ ಸಿಗುವ ಉಡುದಾರಕ್ಕೂ ಗತಿ ಇಲ್ಲದಷ್ಟು ಬಡವನೆನ್ನುವುದಷ್ಟೇ ಹೊರತು, ಅವನನ್ನು ಹೀಯಾಳಿಸುವುದಲ್ಲ.

ಈಗ ಅಸಲಿ ಕಾರಣಕ್ಕೆ ಬರೋಣ, ಗಂಡಸರಿಗೇಕೆ ಈ ಉಡುದಾರದ ಧಾರಣೆ. ಈ ಪ್ರಶ್ನೆಯನ್ನೊಮ್ಮೆ ಹಿರಿಯರಾದ ಶಾಮಭಟ್ಟರ ಬಳಿ ಪ್ರಸ್ತಾಪ ಮಾಡಿದೆ, ಅವರು ಕೊಟ್ಟ ಉತ್ತರ ನನಗೆ ನಿಜಕ್ಕೂ ಅಚ್ಚರಿಯನ್ನುಂಟು ಮಾಡಿತ್ತು. ಹಿಂದೆ ನಮ್ಮ ದೇಶದ ೯೦% ಜನರ ಉದ್ಯೋಗ ವ್ಯವಸಾಯವಾಗಿದ್ದು. ಹೊಲ,ಗದ್ದೆಗಳಲ್ಲಿ ಹಗಲು ರಾತ್ರಿಯೆನ್ನದೆ ದುಡಿದು ಬೆವರು ಬಸಿದು ಬೆಳೆ ಬೆಳೆವ ಕಾಯಕ. ಗಂಡಸರು ಹೊಲಗದ್ದೆಗಳಿಗೆ ನೀರುನಿಡಿ ನೋಡಲು, ಪೈರುಫಸಲು ಕಾಯಲು, ಹಸಿರು ಹುಲ್ಲು ಕೊಯ್ಯಲು ಹಗಲು ರಾತ್ರಿ ಎನ್ನದೆ ಎಂತಹ ಅವೇಳೆಯಲ್ಲಾದರೂ ಹೋಗಲೇಬೇಕಾಗುತ್ತದೆ. ಅಂತಹ ವೇಳೆಯಲ್ಲಿ ಹುಳುಹುಪ್ಪಟೆಗಳನ್ನ ಮುಟ್ಟಿ, ಹಾವು ಹಲ್ಲಿ ಕಚ್ಚಿ ತೊಂದರೆಯಾದರೆ ವಿಷವು ಕಚ್ಚಿದ ಭಾಗದಿಂದ ಮುಂದೆ ಪ್ರವಹಿಸದಂತೆ ತಡೆಯಲು, ಒಸರುವ ರಕ್ತವನ್ನು ತಡೆಗಟ್ಟಲು ಒಂದು ಪುಟ್ಟದಾದ, ಸ್ವಲ್ಪ ಗಟ್ಟಿಮುಟ್ಟಾದ ದಾರದಿಂದ ಕಟ್ಟಬೇಕು. ಹಾಗೇ ಕಟ್ಟಬೇಕೆಂದರೆ ಆ ವೇಳೆಯಲ್ಲಿ ದಾರವನ್ನು ಎಲ್ಲಿಂದ ಹುಡುಕಿ ತರುವುದು ಹೇಳಿ, ಅದು ನಿಜಕ್ಕೂ ಕಷ್ಟದ ಕೆಲಸ. ಅಂತಹ ದಾರವೊಂದು ಸದಾ ನಮ್ಮ ಜೊತೆಯಲ್ಲಿಯೇ ಇದ್ದರೆ ಒಳ್ಳೆಯದಲ್ಲವೆ. ಹಾಗೇ ನಮ್ಮ ಜೊತೆ ಇರಬೇಕೆಂದರೆ ಅದನ್ನು ಕಟ್ಟಿಕೊಳ್ಳುವ ಸೂಕ್ತವಾದ ಸ್ಥಳ ಯಾವುದೆಂಬ ವಿಚಾರಗಳಲ್ಲಿ ನಡೆಸಿದ ಸಂಶೋಧನೆಯ ಫಲವಾಗಿ ಸಿಕ್ಕಿದ್ದೇ ಈ ಸೊಂಟ. ಅಲ್ಲಿಂದಲೇ ಈ ಉಡುದಾರವು ನಮ್ಮ ಸೊಂಟವನ್ನೇರಿ ಕುಳಿತಿತು. ಹೀಗೆ ಸೊಂಟಕ್ಕೆ ದಾರ ಕಟ್ಟಿಕೊಳ್ಳುವ ಅಭ್ಯಾಸವನ್ನು ವಯಸ್ಸಿಗೆ ಬಂದ ಮೇಲೆ ರೂಢಿಸಿಕೊಳ್ಳುವುದು ಕಷ್ಟವೆಂದು ತಿಳಿದೇ, ಈ ಅಭ್ಯಾಸವನ್ನು ಚಿಕ್ಕಂದಿನಲ್ಲೇ ಮಾಡಿಸತೊಡಗಿದರು. ಈ ಕಾರಣಕ್ಕಾಗಿಯೇ ಗಂಡು ಮಕ್ಕಳಲ್ಲಿ ಉಡುದಾರವನ್ನು ಕಟ್ಟಿಕೊಳ್ಳುವ ಪದ್ಧತಿ ರೂಢಿಗತವಾಗಿ ಬಂದಿದೆ. ಅಂದಿನಿಂದ ಇಂದಿನವರೆಗೂ ಈ ಉಡುದಾರವು ನಮ್ಮ ಸೊಂಟವನ್ನು ಏರಿ ಕುಳಿತಿದ್ದು ತನ್ನ ಬಹುಪಯೋಗಿ ಕೆಲಸವನ್ನು ಮಾಡುತ್ತಲೇ ಬರುತ್ತಿದೆ.

ಈ ಲೇಖನವನ್ನು ಮುಕ್ತಾಯಗೊಳಿಸುವ ಮುನ್ನ ನಾನೊಂದು ಪುಟ್ಟ ಕತೆಯನ್ನ ನಿಮ್ಮ ಮುಂದಿಡುತ್ತಿದ್ದೇನೆ. ವ್ಯಕ್ತಿಯೊಬ್ಬ ಪ್ರತಿ ವರುಷ ತನ್ನ ತಂದೆಯ ಶ್ರಾದ್ಧವನ್ನು ಮಾಡುವಾಗ ತಂದೆಗೆ ಇಷ್ಟವಾದ ಎಲ್ಲ ಬಗೆಯ ತಿಂಡಿ ತಿನಿಸುಗಳನ್ನ ಮಾಡಿಸಿ, ಅವರು ಬಳಸುತ್ತಿದ್ದ ಒಡವೆ, ವಸ್ತ್ರ, ವಸ್ತುಗಳನ್ನೆಲ್ಲ ಸಾಲಾಗಿ ಜೋಡಿಸಿಟ್ಟು. ಎಡೆ ಇಟ್ಟು, ಪೂಜೆ ಮಾಡುವ ಮುನ್ನ ಮರೆಯದೆ ಮನೆಯಲ್ಲಿದ್ದ ಬೆಕ್ಕನ್ನ ಹಿಡಿದು ತಂದು ಮೂಲೆಯೊಂದರಲ್ಲಿ ಕಟ್ಟಿ ಹಾಕುತ್ತಿದ್ದ. ನಂತರ ತಂದೆಯ ಶ್ರಾದ್ಧವನ್ನು ಪೂರೈಸಿದ ಬಳಿಕ ಕಟ್ಟಿದ್ದ ಬೆಕ್ಕನ್ನು ಅಲ್ಲಿಂದ ಬಿಚ್ಚಿ ಓಡಿಸುತ್ತಿದ್ದ. ಚಿಕ್ಕಂದಿನಿಂದಲೂ ಇದನ್ನೆಲ್ಲ ನೋಡಿಕೊಂಡೆ ಬರುತ್ತಿದ್ದ ಆ ವ್ಯಕ್ತಿಯ ಮಗ ಬೆಳೆದು ದೊಡ್ಡವನಾದನು. ಹೀಗೊಂದು ದಿನ ಆ ಹುಡುಗನ ತಂದೆ ಇದ್ದಕ್ಕಿದ್ದಂತೆ ಕಾಲವಾದನು. ಈಗ ತಾತ ಮತ್ತು ತಂದೆಯ ಶ್ರಾದ್ಧವನ್ನು ನೆರವೇರಿಸುವ ಜವಾಬ್ದಾರಿ ಆ ಹುಡುಗನ ಮೇಲೆ ಬಿದ್ದಿತು. ಬಗೆ ಬಗೆಯ ತಿಂಡಿ,ತಿನಿಸು, ಒಡವೆ, ವಸ್ತ್ರ ಇತ್ಯಾದಿಗಳನ್ನ ಹೊಂದಿಸಿಕೊಂಡ ಹುಡುಗನಿಗೆ ತನ್ನ ಮನೆಯಲ್ಲಿ ಬೆಕ್ಕು ಇಲ್ಲದಿರುವುದು ಚಿಂತೆಗೀಡು ಮಾಡಿತು, ಪಕ್ಕದವರ ಮನೆಯವರ ಬೆಕ್ಕೊಂದನ್ನು ಒಂದು ದಿನದ ಮಟ್ಟಿಗೆ ಕೊಡಿರೆಂದು ಕೇಳಿಕೊಂಡನು. ಅಷ್ಟರಲ್ಲಿ ಬಂದ ಪುರೋಹಿತರನ್ನು ಶ್ರಾದ್ಧವನ್ನು ಆರಂಭಿಸಿದರು.ಶ್ರದ್ಧಾವು

ಸಾಂಗವಾಗಿ ಸಾಗುತ್ತಿರುವಾಗ ಬೆಕ್ಕನ್ನು ನೆನಪು ಮಾಡಿಕೊಂಡ ಆ ಹುಡುಗ, ಅಯ್ಯೋ ಬೆಕ್ಕನ್ನೇ ಮರೆತು ಬಿಟ್ಟೆನಲ್ಲ ಎಂದುಕೊಂಡು, ತನ್ನಿಂದ ಪ್ರಮಾದವೊಂದು ಆದವನಂತೆ ಮುಖ ಹೊತ್ತು ಸ್ವಲ್ಪ ತಡೆಯಿರಿ ಪುರೋಹಿತರೇ ಎಂದವನೇ ಅವಸರ ಅವಸರವಾಗಿ ಪಕ್ಕದ ಮನೆಗೆ ಓಡಿ ಹೋಗಿ, ದಾರದಲ್ಲಿ ಕಟ್ಟಿದ್ದ ಬೆಕ್ಕುನ್ನು ದರದರನೆ ಎಳೆದು ತಂದು, ಪೂಜೆ ಮಾಡುವ ಜಾಗದ ತುಸು ದೂರದಲ್ಲಿ ಮೂಲೆಯೊಂದರಲ್ಲಿ ಕಟ್ಟಿದನು.

ನಂತರ ಪುರೋಹಿತರಿಗೆ ಮುಂದುವರೆಸುವಂತೆ ಸೂಚಿಸಿ ನೆಮ್ಮದಿಯಾದನು. ಶ್ರಾದ್ಧಾವು ಸಾಂಗವಾಗಿ ಮುಗಿದ ಬಳಿಕ,ಪುರೋಹಿತರಿಗೆ ಪುಷ್ಕಳವಾದ ಭೂರಿ ಭೋಜನ ಬಡಿಸಿ, ಅವರು ಸಂತುಷ್ಟರಾದ ಮೇಲೆ ಕೈತುಂಬಾ ದಕ್ಷಣೆ ಕೊಟ್ಟನು. ಅಷ್ಟು ಹೊತ್ತು ಸುಮ್ಮನಿದ್ದ ಪುರೋಹಿತರು ಈಗ ಬಾಯಿ ತೆರೆದರು. ನೀನು ನಿನ್ನ ತಾತ, ತಂದೆಯ ಶ್ರಾದ್ಧವನ್ನು ಯಾವುದೇ ಕುಂದುಕೊರತೆ ಇಲ್ಲದೆ ಮಾಡಿದ್ದು ಸರಿ,ಆದರೆ ಈ ಬೆಕ್ಕನ್ನು ಎಳೆದು ತಂದು ಪೂಜಾಸ್ಥಳದಲ್ಲಿ ಕಟ್ಟಿದ್ದು ಏಕೆಂದು ತಿಳಿಯಲಿಲ್ಲವೆಂದು ಪ್ರಶ್ನಿಸಿದರು.ಅದಕ್ಕವನು ನಮ್ಮ ತಂದೆ ಬದುಕ್ಕಿದ್ದಾಗ ತಾತನ ಶ್ರಾದ್ಧವನ್ನು ಮಾಡುವಾಗ ಮನೆಯಲ್ಲಿನ ಬೆಕ್ಕನ್ನು ಹಿಡಿದು ತಂದು ಇದೆ ಜಾಗದಲ್ಲಿ ಕಟ್ಟಿಹಾಕಿ, ಅನಂತರವೇ ಶ್ರಾದ್ಧವನ್ನ ಮಾಡುತ್ತಿದ್ದದ್ದು,ಅವರು ಕಾಲವಾದ ಮೇಲೆ ಅವರ ಮಗನಾದ ನಾನು ಆ ನಿಯಮಗಳನ್ನು ಬಿಡಲಾದೀತೇ ಹೇಳಿ. ಅಸಲಿಗೆ ನಮ್ಮ ಮನೆಯಲ್ಲಿ ಈಗ ಬೆಕ್ಕಿಲ್ಲ, ತಂದೆ, ತಾತನ ಆಸೆ ಪೂರೈಸಲು ಪಕ್ಕದ ಮನೆಯಿಂದ ಹಿಡಿಸಿ ತಂದಿದ್ದೇನೆ ಎಂದನು. ಹುಡುಗನ ಮಾತಿಗೆ ನಕ್ಕ ಪುರೋಹಿತರು, ಅಯ್ಯೋ ಪೆದ್ದುಂಡೇ ಮಗನೆ, ನೀನು ಇಂತಾ ಅವಿವೇಕಿಯೆಂದು ತಿಳಿದಿರಲಿಲ್ಲ. ನೋಡು ಮಗು ನಿನ್ನ ತಂದೆ ನಿನ್ನ ತಾತನ ಶ್ರಾದ್ಧವನ್ನ ಮಾಡುವಾಗ ಮನೆಯಲ್ಲಿನ ಬೆಕ್ಕನ್ನು ಹಿಡಿದು ಇಲ್ಲಿ ಕಟ್ಟಿ ಹಾಕುತಿದ್ದ ನಿಜ,ಅದನ್ನ ನೀನು ನೋಡುತ್ತಾ ಬೆಳೆದೆಯೇ ಹೊರತು, ನನ್ನಪ್ಪ ಹೀಗೇಕೆ ಮಾಡುತ್ತಿದ್ದಾನೆಂದು ಕೇಳಿ ತಿಳಿಯುವ ಗೋಜಿಗೆ ಕೈಹಚ್ಚಲಿಲ್ಲ. ನಿನ್ನ ತಂದೆ ಕಾಲವಾದ ಬಳಿಕ ಈಗ ನೀನು ಅದನ್ನೇ ಪಾಲಿಸಿಕೊಂಡು ಬರುತ್ತಿರುವೆಯಷ್ಟೇ. ಶ್ರಾದ್ಧವನ್ನು ಮಾಡುವಾಗ, ಇಡುವ ಎಡೆಯ ತಿಂಡಿಗಳಿಗೆ ಮನೆಯ ಬೆಕ್ಕು ಬಾಯಿ ಹಾಕಬಾರದೆಂಬ ಕಾರಣಕ್ಕೆ ಅದನ್ನು ನಿನ್ನಪ್ಪ ಕಟ್ಟಿ ಹಾಕುತಿದ್ದನೇ ಹೊರತು ಅದು ಸಂಪ್ರದಾಯವೆಂದಲ್ಲ ಮಗು. ಅರಿತು ಮಾಡಿದರೆ ಅದು ಆಚಾರ, ಅರಿಯದೆ ಪಾಲಿಸಿಕೊಂಡು ಬಂದರೆ ಅದು ಕಂದಾಚಾರ (ಮೂಢನಂಬಿಕೆ), ಈಗ ನೀನು ಮಾಡುತ್ತಿದೆಯಲ್ಲ ಹಾಗೇ ಎಂದು ತಿಳಿ ಹೇಳಿದನು.

ನಮ್ಮಲ್ಲಿನ ಬಹುತೇಕ ಆಚರಣೆಗಳಿಂದು ಮೇಲಿನ ಕತೆಯಂತಾಗಿವೆ. ಅರಿಯದೆ ಮಾಡುವ ಆಚರಣೆಗಳು ಮೂಢನಂಬಿಕೆಗಳಾದರೆ, ಅರಿತು ಮಾಡುವ ಆಚರಣೆಗಳು ಸಂಪ್ರದಾಯಗಳಾಗುತ್ತವೆ. ವಿಜ್ಞಾನವೆಂದರೆ ಸತ್ಯ, ಆ ಸತ್ಯದೊಳಗೆ ನಮ್ಮ ದಿನನಿತ್ಯದ ಬದುಕಿನ ಸತ್ವವಿದೆ, ವಿಜ್ಞಾನವೇ ಇಲ್ಲದ ಜಗತ್ತನ್ನು ಊಹಿಸಿಕೊಳ್ಳುವುದು ಕೂಡ ಕಷ್ಟ ಸಾಧ್ಯವೆನ್ನಬಹುದು. ನಮ್ಮ ದಿನನಿತ್ಯದ ಬದುಕಿನಲ್ಲಿ ವಿಜ್ಞಾನವು ಇಂತಹ ಹತ್ತಾರು, ನೂರಾರು ಆಚರಣೆಗಳ ಮೂಲಕ ನಮ್ಮ ಬದುಕಿನೊಳಗೆ ಹಾಸು ಹೊಕ್ಕಾಗಿದೆ.

## ಗ್ರಂಥ ಋಣ


೧. ವೈಜ್ಞಾನಿಕ ಮನೋಧರ್ಮ – ಜಿ. ಟಿ ನಾರಾಯಣ ರಾವ್
೨. ಹೋರಾಟದ ಹಾದಿ –ಡಾ. ಹೆಚ್ ನರಸಿಂಹಮಯ್ಯ
೩. ಆರ್ಶಧರ್ಮ – (ಹಿಂದೂ ಸಂಪ್ರಾದಾಯ ವಿಚಾರಗಳು) – ಬ್ರಹ್ಮಶ್ರೀ ಜಿ.ವಿ ಶರ್ಮಾ ಪಂಡಿತ್